ತಾಲ್ಲೂಕನ್ನು ಸಮಗ್ರವಾಗಿ ಕಡೆಗಣಿಸಿರುವುದು ಸರಿಯಾದ ನೀತಿಯಲ್ಲ. ಆದ್ದರಿಂದ ತಾವು ದಯಮಾಡಿ ಸಂಬಂಧಿಸಿದ ಸಚಿವರಿಗೆ ಇದನ್ನು ಹೇಳಬೇಕು. ಈ ಬಗ್ಗೆ ಅನುಕೂಲ ಮಾಡಿಕೊಡಿ ಇಲ್ಲದಿದ್ದರೆ ಅಲ್ಲಿನ ಜನರಿಗೆ ಬಹಳ ತೊಂದರೆಯಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಖಂಡಿತವಾಗಿ ಈ ಬಗ್ಗೆ ಗಮನ ಕೊಡುತ್ತೇವೆ.

ಗಮನ ಸೆಳೆಯುವ ಸೂಚನೆಗಳು

ಪ್ರೊವಿಜನಲ್ ಸರ್ಟಿಫಿಕೇಟ್ ನೀಡದಿರುವುದರಿಂದ ಕಾಸರಗೋಡಿನ ಅನೇಕ ವಿದ್ಯಾರ್ಥಿಗಳಿಗೆ ತೊಂದರೆ ಆಗಿರುವ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ.—ಅಧ್ಯಕ್ಷರೇ, ಹೊರರಾಜ್ಯದ ಎಸ್.ಎಸ್.ಎಲ್.ಸಿ. ಪಾಸಾದ ಕನ್ನಡ ವಿದ್ಯಾರ್ಥಿಗಳು ನಮ್ಮಲ್ಲಿ ಪಿ.ಯು.ಸಿ. ಸೇರುವುದಕ್ಕೆ ಅವಕಾಶ ಕೊಡಬೇಕಾದರೆ ಅವರಿಗೆ ಪ್ರೊವಿಜನಲ್ ಸರ್ಟಿಫಿಕೇಟ್ ಕೊಡುವುದರ ಬಗ್ಗೆ ಮಾನ್ಯ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜಿ ಪುಟ್ಟಸ್ವಾಮಿಗೌಡ (ನೀರಾವರಿ ಸಚಿವರು).—ಮಾನ್ಯ ಅಧ್ಯಕ್ಷರೇ, ವಿದ್ಯಾ ಸಚಿವರ ಹೆಸರಿನಲ್ಲಿರುವ ಈ ಹೇಳಿಕೆಯನ್ನು ಸಭೆಗೆ ಕೊಡಬಯಸುತ್ತೇನೆ.

ಕರ್ನಾಟಕೇತರ ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಅಭ್ಯರ್ಥಿಗಳನ್ನು ಪ್ರಥಮ ಪಿಯುಸಿ ತರಗತಿಗೆ ದಾಖಲಾತಿ ಮಾಡಿಕೊಳ್ಳಲು ಸಮಾನಾಂತರ ಪರೀಕ್ಷೆಗಳ ಪಟ್ಟಿಯನ್ನು ದಿನಾಂಕ ೧೧-೭-೭೧ರಲ್ಲಿನ ಸುತ್ತೋಲೆ ಮೂಲಕ ತಿಳಿಸಲಾಗಿದೆ. ಅದರಂತೆ ಕೇರಳ ರಾಜ್ಯದ ಎಸ್ಎಸ್ಎಲ್ಸಿ ಪರೀಕ್ಷೆಯನ್ನು ಪ್ರಥಮ ಬಾರಿಗೆ ತೇರ್ಗಡೆ ಹೊಂದಿದ ಅಭ್ಯರ್ಥಿಗಳು ಮಾತ್ರ ಪ್ರಥಮ ಪಿಯುಸಿಗೆ ದಾಖಲಾಗಲು ಅರ್ಹರಾಗಿರುತ್ತಾರೆ.

ಕೇರಳದ (ಕಾಸರಗೋಡು) ಎಸ್ಎಸ್ಎಲ್ಸಿ ಪರೀಕ್ಷೆಯನ್ನು ಪ್ರಥಮ ಬಾರಿಗೆ ತೇರ್ಗಡೆಯಾದ ೪೫೨ ಅಭ್ಯರ್ಥಿಗಳಿಗೆ ೧೯೯೦-೯೧ರಲ್ಲಿ ''ತಾತ್ಕಾಲಿಕ ಪ್ರಾಪ್ತತೆ ಯೋಗ್ಯತಾ ಪತ್ರ''ವನ್ನು ನೀಡಲಾಗಿದೆ. ಅದರಂತೆ ಇದೇ ಪರೀಕ್ಷೆಯನ್ನು (ಕೇರಳ ರಾಜ್ಯದ ಎಸ್ಎಸ್ಎಲ್ಸಿ) ಪ್ರಥಮ ಬಾರಿಯಲ್ಲಿ ಪಾಸಾಗದೆ ಇದ್ದ ೨೫ ಅರ್ಜಿಗಳನ್ನು ಅರ್ಜಿಯ ಹಂತದಲ್ಲಿಯೇ ತಿರಸ್ಕರಿಸಲಾಗಿದೆ.

ತ ಹಿಂದೆ ೨ನೇ ಮತ್ತು ೩ನೇ ಪ್ರಯತ್ನದಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಮೇಲೆ ಹೇಳಿರುವ ಯೋಗ್ಯತಾ ಪತ್ರವನ್ನು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇಲ್ಲಿ ಪ್ರಮುಖವಾದ ಎರಡು ಅಂಶಗಳಿಂದರೆ, ಕೇರಳದ ಕಾಸರಗೋಡಿನ ಸುತ್ತಮುತ್ತ ಯಾರು ಎಸ್.ಎಸ್.ಎಲ್.ಸಿ.ಯನ್ನು ಎರಡು ಮೂರನೆ ಬಾರಿಗೆ ಪಾಸ್ ಮಾಡಿದ್ದಾರೋ ಅವರು ಕರ್ನಾಟಕದಲ್ಲೇ ಪಿ.ಯು.ಸಿ.ಗೆ ಸೇರಬೇಕೆಂದು ಬರುವ ಸಂದರ್ಭದಲ್ಲಿ ಅವರಿಗೆ ಪ್ರಾವಿಜನಲ್ ಎಲಿಜಿಬಿಲಿಟಿ ಸರ್ಟಿಫಿಕೇಟ್ ಕೊಡಬೇಕಾಗುತ್ತದೆ ಆದರೆ ೨ನೇ ಮತ್ತು ೩ನೇ ಪ್ರಯತ್ನದಲ್ಲಿ ಪಾಸಾದವರಿಗೆ ಹಾಗೆ ಕೊಡಲು ಆಗುವುದಿಲ್ಲವೆಂದು ಹೇಳಿದ್ದಾರೆ. ಪಾಸ್ ಎಂದರೆ ಎರಡು ಅಥವಾ ಮೂರನೇ ಬಾರಿಗೆ ಪಾಸ್ ಆದರೂ ಪಿ.ಯು.ಸಿ.ಗೆ ಸೇರಲು ಯಾವ ಅಡ್ಡಿಯೂ ಬರುವುದಿಲ್ಲ. ಆದ್ದರಿಂದ ನೀವು ಸರ್ಟಿಫಿಕೇಟ್ ಕೊಡದಿದ್ದರೆ ಆ ಕನ್ನಡಿಗರಿಗೆ ತೊಂದರೆಯಾಗುತ್ತದೆ. ಆದ್ದರಿಂದ ತಾವು ಈಗಿನ ಸರ್ಕಾರಿ ಆಜ್ಞೆ ಏನಿದೆ, ಅದನ್ನು ಪುನರ್ವಿಮರ್ಶೆ ಮಾಡದಿದ್ದರೆ ೧೫೦ ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತದೆ. ಅವರುಗಳು ಸನ್ನಬಳಿಬಂದಿದ್ದರು ಅವರಿಗೆ ಇಲ್ಲೆ ಅವಕಾಶವಿಲ್ಲ ಎಂದು ಬಿಟ್ಟರೆ ಅವರು ಎಲ್ಲಿಗೆ ತಾನೇ ಹೋಗಬೇಕು? ಸರ್ಕಾರ ಕೂಡಲೇ ಇವರಿಗೊ ಅವಕಾಶ ಮಾಡಿಕೊಡ ಬೇಕು. ಈಗ ಸರ್ಕಾರ ಕೊಟ್ಟಿರುವುದು ತಪ್ಪು ಮಾಹಿತಿ ಇದೆ. ಹಿಂದಿನ ಪದ್ಧತಿಯನ್ನು ಈಗಲೂ ಮುಂದುವರೆಸದೆ. ಇದನ್ನು ಪರಿಶೀಲಿಸಿ, ಹೊಸದಾಗಿ ಒಂದು ಸರ್ಕಾರಿ ಆಜ್ಞೆ ಹೊರಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಸಚಿವರು).—ಇದನ್ನು ಪರಿಶೀಲಿಸಲಾಗುವುದು.

ಶ್ರೀ ವಾಟಾಳ್ ನಾಗರಾಜ್,—ಮಾನ್ಯ ಉಪಾಧ್ಯಕ್ಷರೇ, ಇದು ಬಹಳ ಗಂಭೀರವಾದಂಥ ಪರಿಸ್ಥಿತಿ ಗಡಿನಾಡ ಕನ್ನಡಿಗರಿಗೆ ಎಲ್ಲ ರೀತಿಯ ನೆರವನ್ನು ಕೊಡಬೇಕು ಎನ್ನುವುದು ಸರ್ಕಾರದ ನೀತಿ ಮತ್ತು ನಿಲುವು ಆಗಿದೆ. ಗಡಿನಾಡಿನ ಕನ್ನಡಿಗರಿಗೆ ಎಲ್ಲ ರೀತಿಯ ನೆರವನ್ನು ಕೊಡಬೇಕು ಇಲ್ಲಿ ಕಾಸರಗೋಡು

ಒಂದೇ ಅಲ್ಲ. ಸುತ್ತಮುತ್ತ ಇರತಕ್ಕಂಥ ಗಡಿ ನಾಡ ಕನ್ನಡಿಗರಿಗೆ ನಮ್ಮಲ್ಲಿ ವೈದ್ಯಕೀಯ ಕಾಲೇಜುಗಳಲ್ಲಿ ಮತ್ತು ತಾಂತ್ರಿಕ ಕಾಲೇಜುಗಳಲ್ಲಿ ಅವಕಾಶ ಮಾಡಿಕೊಡಬೇಕಾಗುತ್ತದೆ. ಈ ರೀತಿ ಇರುವಾಗ ಕರ್ನಾಟಕದಲ್ಲಿ ಓದುತ್ತೇವೆ ಎಂದು ಹೇಳಿ ಬರತಕ್ಕಂಥ ಮಕ್ಕಳಿಗೆ ಅವಕಾಶ ಕೊಡದಿದ್ದರೆ ಹೇಗೆ ? ಪಾಸ್ ಆದಮೇಲೆ ಅವರಿಗೆ ಪಿ.ಯು.ಸಿ.ಗೆ ಸೇರಲು ಅವಕಾಶವನ್ನು ಕೂಡಬೇಕಾಗುತ್ತದೆ. ಅವರು ಎಸ್.ಎಸ್.ಎಲ್.ಸಿ. ಪಾಸಾಗಿ ಪಿ.ಯು.ಸಿ.ಗೆ ಸೇರಲು ಬಂದಾಗ ಅವರಿಗೆ ಅವಕಾಶವನ್ನು ಕೊಡಬೇಕು. ಇಲ್ಲಿ ಎರಡನೇ ಸುತ್ತಿನಲ್ಲಿ ಮೂರನೇ ಸುತ್ತಿನಲ್ಲಿ ಫೇಲಾಗಿ ನಂತರ ಪಾಸಾಗಿದ್ದಾರೆ ಎನ್ನುವ ಒಂದೇ ಕಾರಣಕ್ಕಾಗಿ ಅವರಿಗೆ ಪಿ.ಯು.ಸಿ.ಗೆ ಸೀಟುಗಳನ್ನು ಕೊಡುವುದಿಲ್ಲ ಎಂದು ಹೇಳಿದರೆ ಹೇಗೆ ? ಅವರಿಗೂ ಸಹಾ ಅವಕಾಶವನ್ನು ಕಲ್ಪಿಸಿಕೊಡಬೇಕು. ಕಾಸರಗೂಡಿನಿಂದ ಬರತಕ್ಕಂತ ಕನ್ನಡದ ಮಕ್ಕಳಿಗೆ ಎಲ್ಲಾ ರೀತಿಯ ನೆರವನ್ನು ಕೊಡಬೇಕು. ಸರ್ಕಾರದಲ್ಲಿ ಅದಕ್ಕೆ ಕಾನೂನು ಇಲ್ಲದೇ ಇದ್ದರೂ ಕಾನೂನನ್ನು ಬದಲಾವಣೆ ಮಾಡಿ ಗಡಿ ನಾಡ ಕನ್ನಡದ ಮಕ್ಕಳಿಗೆ ಅವರ ಹಿತದೃಷ್ಟಿಯಿಂದ ಅವರಿಗೆ ಪಿ.ಯು.ಸಿ.ಗೆ ಸೇರಲು ಅವಕಾಶಮಾಡಿ ಕೊಡಬೇಕೆಂದು ಸರ್ಕಾರದವರಲ್ಲಿ ಅತ್ಯಂತಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಉಪಾಧ್ಯಕ್ಷರೇ, ಇರುವ ಕಾನೂನನ್ನೇ ನಾನು ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ಸದಸ್ಯರುಗಳು ಅವರಿಗೆ ವಿಶೇಷವಾದ ಒಂದು ಅವಕಾಶವನ್ನು ಒದಗಿಸಬೇಕು ಎಂದು ಹೇಳಿದರೆ, ನಾನು ಅದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಪರಿಶೀಲನೆಯನ್ನು ಮಾಡದೇ ತತ್‌ಕ್ಷಣವೇ ಹೇಳತಕ್ಕಂಥದ್ದು ಸರಿ ಆಗುವುದಿಲ್ಲ. ಈ ಕಾಲಿಂಗ್ ಅಟೆನ್‌ಷನ್‌ಗೆ ಸಾಕಷ್ಟು ಕಾಲಾವಕಾಶ ಕೂಡ ಸಿಗಲಿಲ್ಲ. ಮೊನ್ನೆ ದಿವಸ ನೋಟೀಸ್ ಬಂತು ಇಂದು ಕಾರ್ಯಕ್ರಮದ ಪಟ್ಟಿಯಲ್ಲಿ ಸೇರಿದೆ. ನಾನು ಕೂಡ ಬೆಳ್ಳಿಗೆ ನೋಡುತ್ತಿದ್ದೆ...

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ಮನಸ್ಸು ಮಾಡಿದರೆ ಇದು ದೊಡ್ಡದೇನೂ ಇಲ್ಲ ಮತ್ತು ಕಾಂಪ್ಲಿಕೇಟೆಡ್ ಕೂಡಾ ಅಲ್ಲ. ಈಗ ಇರುವ ಪ್ರಕಾರ ಕೇರಳದ ಕಾಸರಗೋಡಿನಿಂದ ಎಸ್.ಎಸ್.ಎಲ್.ಸಿ. ಪಾಸಾಗಿ ಇಲ್ಲಿ ಬಂದಂಥವರಿಗೆ ನೀವು ಪ್ರೊವಿಜನಲ್ ಸರ್ಟಿಫಿಕೇಟ್ ಕೊಟ್ಟು ಪಿ.ಯು.ಸಿ.ಗೆ ಸೇರುವುದಕ್ಕೆ ಕನ್ನಡದ ಮಕ್ಕಳಿಗೆ ಅನುಕೂಲ ಮಾಡಿಕೊಡುತ್ತಿಲ್ಲ. ಈಗ ಯಾರು ಎಸ್.ಎಸ್.ಎಲ್.ಸಿ. ಯನ್ನು ಮೊದಲ ಸಾರಿ ಮಾಡುವುದಕ್ಕಾಗದೇ ಎರಡನೇ ಅವಧಿಗೆ ಮೂರನೇ ಅವಧಿಗೆ ಪಾಸ್ ಮಾಡಿದ್ದಾರೆ, ಅಂಥವರಿಗೆ ಎಲಿಜಬಿಲಿಟಿ ಸರ್ಟಿಫೀಕೇಟನ್ನು ಕೊಡುವ ಬಗ್ಗೆ ಪ್ರಶ್ನೆ ಬಂದಿದೆ. ನೀವು ಈ ಈ ವರ್ಷ ಅವರಿಗೆ ಅಡ್ಮಿಷನ್ ಕೊಡಡಿದ್ದರೆ ಕನ್ನಡದ ಮಕ್ಕಳಿಗೆ ಅಭ್ಯಾಸ ಮುಂದುವರಿಸುವುದಕ್ಕೆ ತೊಂದರೆಯಾಗುತ್ತದೆ. ಈಗಿನ ಸರ್ಕಾರ ಆಜ್ಞೆಯಲ್ಲಿ ಈ ರೀತಿ ಕೊರತೆ ಇವ್ವರೆ ಒಂದನೇ ಅಟೆಮ್ಪ್ಟ್‌ಗೆ ಪಾಸ್ ಮಾಡಲಿ, ಎರಡನೇ ಅಟೆಮ್ಪ್ಟ್‌ಗೆ ಪಾಸ್ ಮಾಡಲಿ ಪಾಸೇ ಪಾಸ್. ಆದ್ದರಿಂದ ಅವರಿಗೆ ಪಿ.ಯು.ಸಿ, ಅಭ್ಯಾಸ ಮಾಡುವುದಕ್ಕೆ ಅವಕಾಶ ಇರುತ್ತದೆ. ದಯಮಾಡಿ ಕನ್ನಡದ ಮಕ್ಕಳಿಗೆ ಅಭ್ಯಾಸಕ್ಕೆ ಅನುಕೂಲವಾಗುವ ಹಾಗೆ ಮಾಡಬೇಕು. ತಮಗೆ ಆ ಶಕ್ತಿ ಇದೆ. ತಾವು ಹಿರಿಯ ಸಚಿವರು ಕೂಡಾ ಇದ್ದೀರಿ. ಇದರಲ್ಲಿ ಹಣಕಾಸಿದ ಒಂದು ಕೊರತೆಯ ಪ್ರಶ್ನೆ ಏನೂ ಬರುವುದಿಲ್ಲ. ಆ ಮಕ್ಕಳ ಅಭ್ಯಾಸಕ್ಕೆ ಅನುಕೂಲವಾಗುವ ಹಾಗೆ ಮಾಡಬೇಕು. ಇಲ್ಲದಿದ್ದರೆ ಅವರು ಬೀದಿ ಪಾಲಾಗುತ್ತಾರೆ. ದಯವಾಮಾಡಿ ಇದರ ಬಗ್ಗೆ ಸ್ಪಷ್ಟವಾದ ತಮ್ಮ ನಿಲುಮೆಯನ್ನು ತಿಳಿಸಬೇಕು,

ಶ್ರೀ ವಿ. ರುಕ್ಕಯ್ಯ ಪೂಜಾರಿ.—ಸುಮಾರು ೧೦೦-೧೫೦ ಹುಡುಗರು ಆ ರೀತಿ ಬಂದಿದ್ದಾರೆ. ಅವರು ಹೇಳುವ ಪ್ರಕಾರ ಕಳೆದ ಸಾರಿ ಈ ರೀತಿ ಎಲಿಜಿಬಿಲಿಟಿ ಸರ್ಟಿಫಿಕೇಟ್‌ನ್ನು ಕೊಟ್ಟಿದ್ದಾರೆ. ಈ ವರ್ಷ ಮಾತ್ರ ಕೊಟ್ಟಿಲ್ಲ. ಆಂಧ್ರ, ತಮಿಳುನಾಡು, ಮಹಾರಾಷ್ಟ್ರದ ಗಡಿಯಲ್ಲಿ ಕಲಿತಂಥ ಹುಡುಗರಿಗೆ ಕೂಡ ಈ ಸಲ ಕೊಟ್ಟಿದ್ದಾರೆ. ಆದರೆ ಕೇರಳದಲ್ಲಿ ಕಲಿತಂಥ ಹುಡುಗರಿಗೆ ಮಾತ್ರ ಕೊಟ್ಟಿಲ್ಲವೆಂದು ಆ ಹುಡುಗರು ನನಗೆ ಬಂದು ಹೇಳಿದ್ದಾರೆ. ಮತ್ತೊಂದು ವಿಷಯ ಏನು ಎಂದೇ ಹೇಳಿದರೆ, ಈ ಬಂದು ಉತ್ತರ ನೋಡುವುದಕ್ಕೆ ತಮಾಷೆಯಾಗಿ ಕಾಣುತ್ತದೆ. ಪ್ರಥಮ ಸುತ್ತಿನಲ್ಲಿ ಪಾಸಾಗಲಿ, ಎರಡನೇ ಸುತ್ತಿನಲ್ಲಿ ಪಾಸಾಗಲಿ, ಎಲ್ಲರಿಗೂ ಪರ್ಮಿಷನ್ ಕೊಡಬೇಕಾಗಿರುವುದು ನ್ಯಾಯ ಎಂದು ಕಾಣುತ್ತದೆ, ಇದರ ಬಗ್ಗೆ ಸನ್ಮಾನ್ಯ ಸಚಿವರು ಗಮನ ಹರಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪೆಂಕಟೇಶ್.—ಮಾನ್ಯ ಉಪಾಧ್ಯಕ್ಷರೇ, ಮೊದಲ ಸಾರಿ ಪಾಸಾದವರಿಗೆ ಅವಕಾಶವನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ, ಕಾಸರಗೋಡಿನಿಂದ ಇಲ್ಲಿಗೆ ಬಂದು ಓದುತ್ತೇನೆ ಎಂದು ಹೆಚ್ಚಿನ ರೀತಿಯಲ್ಲಿ ವಿದ್ಯಾರ್ಥಿಗಳು ಬರುತ್ತಿದ್ದಾರೆ. ಈ ರೀತಿ ಮಕ್ಕಳು ಧೈರ್ಯ ಮಾಡಿ ನಾವು ಇಲ್ಲಿ ಓದುತ್ತೇವೆ ಎಂದು ಬರುತ್ತಿದ್ದಾರೆ. ಅವನ್ನು ನಾವು ಸ್ವಾಗತ ಮಾಡಬೇಕಾಗುತ್ತದೆ. ಎರಡನೆ ಸಾರಿಅಥವಾ ಮೂರನೇ ಸಾರಿ ಪಾಸ್ ಆದವರಿಗೂ ಕೂಡಾ ಅವಕಾಶ ಮಾಡಿಕೊಡುವುದು ಸೂಕ್ತ.

ತಾವು ಮನಸ್ಸು ಮಾಡಿದರೆ ಇದು ಕಷ್ಟವೇನೂ ಆಗುವುದಿಲ್ಲ. ತಾವು ಹಿರಿಯರು ಇದ್ದೀರಿ. ಇದು ಬಹಳ ದೊಡ್ಡ ಕೆಲಸವೇನೂ ಆಗಿಲ್ಲ. ನಿನ್ನೆ ದಿವಸ ಈ ಗಮನ ಸೆಳೆಯುವ ಸೂಚನೆಗೆ ನಾಳೆ ಉತ್ತರವನ್ನು ಕೊಡುತ್ತೇನೆ ಎಂದು ಹೇಳಿದ್ದಿರಿ. ತಾವು ಸ್ವಲ್ಪ ಮನಸ್ಸು ಮಾಡಿದರೆ ಇದು ಅಂಥ ದೊಡ್ಡ ಕೆಲಸವೇನೂ ಅಲ್ಲ. ತಾವು ಸಹಾನುಭೂತಿಯಿಂದ ಈ ವಿದ್ಯಾರ್ಥಿಗಳು ಈ ರಾಜ್ಯದಲ್ಲಿ ಓದುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಶ್ರೀ ಬಾಬುಗೌಡ ರುದ್ರಗೌಡ ಪಾಟೀಲ್.—ಮಾನ್ಯ ಉಪಾಧ್ಯಕ್ಷರೇ, ಎರಡನೇ ಸಾರಿ ಮೂರನೇ ಸಾರಿ ಫೇಲ್ ಆದಂಥ ಮಕ್ಕಳು ದಡ್ಡರು ಎನ್ನುವುದೇನೂ ಇಲ್ಲ. ಯಾವುದಾದ್ಯಾವುದೋ ಕಾರಣಕ್ಕೆ ಅವರು ಫೇಲ್ ಆಗಿರಬಹುದು ಇದಕ್ಕೆ ಬಡತನ ಕಾರಣವಾಗಿರಬಹುದು, ಹಿಂದುಳಿದ ವರ್ಗದವರು ಕೆಲವೊಮ್ಮೆ ಎರಡು ಸಾರಿ–ಮೂರು ಸಾರಿ ಫೇಲ್ ಆಗಿರಬಹುದು. ಆ ಕಾರಣಕ್ಕೆ ಎರಡು ಸಾರಿ ಮೂರು ಸಾರಿ ಫೇಲ್ ಆದಂಥ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಕೊಡಬಾರದು ಎನ್ನುವ ವಿಚಾರದ ಹಿಂದೆ ಇರುವಂಥ ಸರ್ಕಾರದ ನೀತಿ ಏನು ಎಂದು ನಾನು ಪ್ರಶ್ನೆ ಮಾಡುತ್ತಿದ್ದೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಕಾಸರಗೋಡು ಬಗ್ಗೆ ಹೇಳಿದ್ದೀರಿ. ಕಾಸರಗೋಡು ನಮ್ಮದೇ ಆಗಿರಬೇಕಾಗಿತ್ತು. ಮಡಕಶಿರ ನಮ್ಮದೇ ಆಗಿರಬೇಕಾಗಿತ್ತು. ಆಲೂರು ನಮ್ಮದೇ ಆಗಿರಬೇಕಾಗಿತ್ತು. ಆಲೂರು ಆಧೋನಿ ನಮ್ಮದೇ ಆಗಿರಬೇಕಾಗಿತ್ತು. ಕಾರಣಾಂತರದಿಂದ ಅದು ದೂರ ಇದೆ. ಅದು ದೊಡ್ಡ ಪ್ರಶ್ನೆ. ಏಕೆಂದರೆ ಅದೆಲ್ಲಾ ನಮಗೆ ಬರಬೇಕಾಗಿತ್ತು ಎಂದು ಆ ಒಂದು ಹೋರಾಟದಲ್ಲಿ ನಾವು ಇದ್ದಂತಹವರು. ಆದು ಸೇರಬೇಕು ಎಂದು ಹೇಳಿ ದಿವಂಗತ ಕೆ. ಆರ್. ಕಾರಂತ ಅವರು ಗೋಪಾಲನ್ ವಿರುದ್ಧ, ಈ ಒಂದು ತತ್ವಕ್ಕೋಸ್ಕರ ೨–೩ ಸಲ ಲೋಕಸಭೆ ಚುನಾವಣೆಗೆ ನಿಂತರು. ನಾವು ಎಷ್ಟೊಬ್ಬೇ ಸಾರಿ ಸೋಷಿಯಲಿಸ್ಟ್ ಪಾರ್ಟಿಯಿಂದ ಬೇಡ, ಬೇರೆ ಕಡೆಯಿಂದ ನಿಲ್ಲಿ, ಇದು ಗೆಲ್ಲುವ ಸ್ಥಳ ಅಲ್ಲ ಎಂದು ಹೇಳಿದರೂ ಕೂಡ, ಇದು ಒಂದು ನೀತಿ ಪ್ರಶ್ನೆ ಎಂದು ಹೇಳಿ ಅವರು ಅಲ್ಲಿ ಸೋಲುವ ಅನುಭವಿಸಿದರು. ಆ ಮಾತು ಬೇರೆ. ಆದರೆ ಇದು ಏನು ಆಗಿದೆ ಎಂದರೆ ಕೇರಳದಲ್ಲಿ ಏನು ಅನುಕೂಲ ಇದೆ, ಅಷ್ಟನ್ನು ಮಾತ್ರ ಇಲ್ಲಿ ಪಿಯುಸಿ ಅಡ್ಮಿಷನ್‌ಗೆ ಪರಿಗಣಿಸಿದ್ದಾರೆ. ಆದಕ್ಕೆ ನಾನು ಹೇಳಿದ್ದು. ನಾನು ವಿಚಾರಿಸುತ್ತೇನೆ, ಅಧಿಕಾರಿಗಳಿಗೆ ಕೇಳುತ್ತೇನೆ. ಇದರಲ್ಲಿ ಹೆಣಕಾಸಿನ ಪ್ರಶ್ನೆ ಏನೂ ಇಲ್ಲ.....

ಶ್ರೀ ಎಂ. ಪಿ. ವೆಂಕಟೇಶ್.—ನೀವು ಮನಸ್ಸು ಮಾಡುವುದು ಒಂದೇ ಉಳಿದಿರುವುದು.

ಶ್ರೀ ಕೆ. ಹೆಚ್. ರಂಗನಾಥ್.—ನಾನು ಮನಸ್ಸು ಮಾಡಿಲ್ಲ ಎಂದು ನಿಮಗೆ ಹೇಗೆ ಗೊತ್ತು? ಇದು ನನ್ನ ಮನಸ್ಸಿನ ಪ್ರಶ್ನೆ ಅಲ್ಲ. ಈಗ ನಿರಾಕರಣೆ ಮಾಡಿರತಕ್ಕದ್ದು ಕೇವಲ ೨೫ ಮಂದಿಗೆ ಮಾತ್ರ.

ಶ್ರೀ ಬಿ. ಎಸ್. ಯಡಿಯೂರಪ್ಪ.—೨೫ ಮಂದಿಗೆ ಅಲ್ಲ, ೭೫ ಮಂದಿಗೆ ನಿರಾಕರಣೆ ಮಾಡಿರುವುದು.

ಶ್ರೀ ಕೆ. ಹೆಚ್. ರಂಗನಾಥ್.—ಅದನ್ನು ನಾನು ಪರಿಶೀಲನೆ ಮಾಡಿಸಿ, ಅಧಿಕಾರಿಗಳ ಜೊತೆ, ಸೆಕ್ರೆಟರಿಗಳ ಜೊತೆ ವಿಚಾರ ಮಾಡಿ, ಸಾಧ್ಯಾಸಾಧ್ಯತೆಗಳನ್ನು ತಿಳಿದುಕೊಂಡು ಅದನ್ನು ಹೇಗೆ ಮಾಡಬೇಕು ಎಂದು ನೋಡುತ್ತೇನೆ. ತತ್‌ಕ್ಷಣಕ್ಕೆ ಇಲ್ಲಿ ಆಗಬಹುದು. ಆಗಲಿ ಎಂದು ಹೇಳಲಿಕ್ಕೆ ನನಗೆ ಮನಸ್ಸು ಇಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ಇಲ್ಲಿಯೇ ಉತ್ತರ ಕೊಡಬೇಕೆಂದು ನಾನು ಹೇಳುವುದಿಲ್ಲ. ಇದರಲ್ಲಿ ಕಾಂಪ್ಲಿಕೇಶನ್ಸ್ ಏನಿದೆ? ಇಲ್ಲಿ ಏನು ಸಮಸ್ಯೆ ಇದೆ. ಎಸ್‌ಎಸ್‌ಎಲ್‌ಸಿಯಲ್ಲಿ ಮೊದಲ ಸಲ ಪಾಸ್ ಮಾಡಿದವರಿಗೆ ನೀವು ಈಗಾಗಲೇ ಅಡ್ಮಿಷನ್ ಕೊಡುತ್ತಿದ್ದೀರಿ. ಆದರೆ ಎರಡನೇ ಸಾರಿ ಇಲ್ಲವೇ ಮೂರನೇ ಸಾರಿ ಪಾಸ್ ಮಾಡಿದವರಿಗೆ ಇಲ್ಲಿ ವಿದ್ಯಾಭ್ಯಾಸ ಮಾಡಲು ಈ ಒಂದು ಅನುಕೂಲವನ್ನು ಏತಕ್ಕೆ ವಿಸ್ತರಣೆ ಮಾಡಬಾರದು? ನಮ್ಮ ರಾಜ್ಯದಲ್ಲಿ ಎರಡು ಸಾರಿ ಮೂರು ಸಾರಿ ಫೇಲ್ ಆಗಿ ನಂತರ ಪಾಸ್ ಆದವರಿಗೆ ನೀವು ಪಿಯುಸಿಗೆ ಅಡ್ಮಿಷನ್ ಮಾಡಿಕೊಳ್ಳುತ್ತಿದ್ದೀರಿ ತಾನೇ? ಅದು ಇಡೀ ದೇಶದಲ್ಲಿರುವಂತಹ ಪದ್ಧತಿ ತಾನೇ. ಹಾಗಿರಬೇಕಾದರೆ ತಾವು ಹೇಳಿದ ಹಾಗೆ ನಮ್ಮ ಹಿಂದಿನವರು ಈ ರೀತಿ ಹೋರಾಟ ಮಾಡಿದರೂ ಸಹ ಕಾಸರಗೋಡನ್ನು ಉಳಿಸಿಕೊಳ್ಳುವುದಕ್ಕೆ ಆಗಿಲ್ಲ. ಕಾಸರಗೋಡಿನ ಕನ್ನಡ ಮಕ್ಕಳು ಇಲ್ಲಿ ಅಭ್ಯಾಸ ಮಾಡುವುದನ್ನು ತಪ್ಪಿಸಿ ಅಲ್ಲಿಯೇ ಇರುವಂತಹ ಪ್ರಯತ್ನ ಆಗುವುದು ಬೇಡ. ಈ ವಿಷಯದಲ್ಲಿ ತಮ್ಮಂಥವರು ಅವಕಾಶ

ಮಾಡಿಕೊಡಬೇಕು. ಎಲ್ಲರಿಗೂ ಅವಕಾಶ ಸಿಗಬೇಕು, ಅವಕಾಶ ಸಿಕ್ಕರೆ ತಾನೆ, ಅವರಿಗೆ ಅನುಕೂಲ ಸಿಗುವುದು?

ಶ್ರೀ ಕೆ. ಹೆಚ್. ರಂಗನಾಥ್. ಕಾಸರಗೋಡಿನವರು ಏನೂ ದಡ್ಡರಲ್ಲ ಪ್ರಶ್ನೆ ಅದಲ್ಲ. ೧೯೭೧ನೇ ಇಸವಿಯಲ್ಲಿ ಈ ಸರ್ಕಾರದ ಆರ್ಡರ್ ಬಂದಿದೆ, ಅದನ್ನು ಪರಿಶೀಲನೆ ಮಾಡಿಸುತ್ತೇನೆ. ಅದನ್ನು ನೋಡೋಣ ಹಾಗೆ ಎಂದು ನಾನು ಹೇಳಿದೆ.

ಹಾಸನ ಜಿಲ್ಲೆ ಸಾರ್ವಜನಿಕ ಶಿಕ್ಷಣ ಉಪನಿರ್ದೇಶಕರು ಮಾಡಿದ ಪ್ರಾಥಮಿಕ ಶಿಕ್ಷಕರ ವರ್ಗಾವಣೆ ಪಟ್ಟಿಗೆ ಹಾಸನ ಜಿಲ್ಲಾ ಪರಿಷತ್ ಅಧ್ಯಕ್ಷರು ದಿನಾಂಕ ೧ನೇ ಜೂನ್ ೧೯೯೦ ರಂದು ತಡೆಯಾಜ್ಞೆ ನೀಡಿರುವ ಬಗ್ಗೆ

SRI K. H. HANUME GOWDA.—Sir, I call the attention of the Minister for Education, Youth Services, Kannada and Culture to the situation arised due to issue of stay order on 31st May 1990 by the President, Hassan Zilla Parishat on the transfer orders issued by the Educational Officer.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ವಿದ್ಯಾ ಸಚಿವರಲ್ಲಿ ಒಂದು ಮನವಿ. ಇಲ್ಲಿ ಏನು ಆಗಿದೆ ಎಂದರೆ ಆ ವಿದ್ಯಾರ್ಥಿಗಳ ಮನಸ್ಸಿಗೆ ಬಹಳ ನೋವು ಆಗಿದೆ. ವಿದ್ಯಾ ಇಲಾಖೆಯ ಸಚಿವರು ಇವರಿಗೆ ಏನಾದರೂ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಅವರ ಪ್ರವೇಶಕ್ಕೆ ಬಹಳ ತೊಂದರೆಯಾಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ನಾನು ಇದನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದೇನೆ. ಬಹಳ ದಿವಸ ತೆಗೆದುಕೊಳ್ಳುವುದಿಲ್ಲ. ನಾನು ಆಫೀಸಿಗೆ ಹೋದ ಕೂಡಲೇ ...

ಶ್ರೀ ವಾಟಾಳ್ ನಾಗರಾಜ್.—ತಾವು ಮಾಡಲಾರಿರಿ ಎಂಬ ಭಾವನೆಯಿಂದ ನಾನು ಹೇಳಲಿಲ್ಲ. ಕೂಡಲೇ ತಾವು ಕ್ರಮ ತೆಗೆದುಕೊಳ್ಳಲಿಲ್ಲ ಎಂದರೆ ಅವರಿಗೆ ಬೇರೆ ಕಾಲೇಜುಗಳಲ್ಲಿ ಪ್ರವೇಶ ಸಿಗುವುದಿಲ್ಲ, ಆ ಪ್ರಶ್ನೆ ಸಹ ಬರುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ನಾನು ಅಧಿಕಾರಿಗಳ ಜೊತೆ ಪ್ರಸ್ತಾಪ ಮಾಡದೇ ತತ್‌ಕ್ಷಣಕ್ಕೆ ಹೇಳತಕ್ಕದ್ದು ಸಮಂಜಸ ಅಲ್ಲ. ನಾನು ವಿಚಾರಿಸುತ್ತೇನೆ, ನೋಡುತ್ತೇನೆ ಎಂದು ಹೇಳಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ನಾಳೆ ಅಥವಾ ನಾಡಿದ್ದು ಪರಿಶೀಲನೆ ಮಾಡಿ ತಮ್ಮ ನಿರ್ಧಾರವನ್ನು ಪ್ರಕಟಪಡಿಸಿ.

ಶ್ರೀ ಕೆ. ಹೆಚ್. ರಂಗನಾಥ್.—ಆಗಲಿ.

ಉಪಾಧ್ಯಕ್ಷರು.—ಶ್ರೀ ಹನುಮೇಗೌಡರು ತಮ್ಮ ಗಮನ ಸೆಳೆದಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್.—ಹನುಮೇಗೌಡರು ಇಂಗ್ಲೀಷ್‌ನಲ್ಲಿ ಗಮನ ಸೆಳೆದಿದ್ದಾರೆ. ಅವರಿಗೆ ಇಂಗ್ಲೀಷ್‌ನಲ್ಲಿ ಉತ್ತರ ಹೇಳಬೇಕೋ ಅಥವಾ ಕನ್ನಡದಲ್ಲಿ ಹೇಳಬೇಕೋ?

ಶ್ರೀ ವಾಟಾಳ್ ನಾಗರಾಜ್.—ಕನ್ನಡದಲ್ಲಿಯೇ ಉತ್ತರ ಹೇಳಿ.

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಸಚಿವರು).—ಮಾನ್ಯ ಉಪಾಧ್ಯಕ್ಷರೇ, ಜಿಲ್ಲಾ ಪರಿಷತ್ತುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ 'ಸಿ' ಮತ್ತು 'ಡಿ' ಗುಂಪಿಗೆ ಸೇರಿದ ನೌಕರರನ್ನು ವರ್ಗಾವಣೆ ಮಾಡುವ ಅಧಿಕಾರವು ಸಂಬಂಧಪಟ್ಟ ಜಿಲ್ಲಾ ಪರಿಷತ್ತಿಗೆ ಇದ್ದಿತು. ದಿನಾಂಕ ೨೪ನೇ ಮೇ ೧೯೯೦ ರಂದು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯವು ಅಧಿಕೃತ ಜ್ಞಾಪನ ಸಂಖ್ಯೆ ಆರ್‌ಡಿಪಿಆರ್ ೮೮ ಜೆಡ್‌ಪಿಎ ೯೦ ರಲ್ಲಿ ಜಿಲ್ಲಾ ಪರಿಷತ್ತುಗಳಲ್ಲಿ ನಿಯೋಜನೆ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವ ನೌಕರರ ವರ್ಗಾವಣೆಗಳನ್ನು ಹೇಗೆ ಮಾಡಬೇಕೆಂಬ ವಿಚಾರದ ಬಗ್ಗೆ ಮಾರ್ಗಸೂಚಿಗಳನ್ನು ಹೇಳಿರುತ್ತದೆ. ಈ ಮಾರ್ಗ ಸೂಚಿಗಳ ಅನ್ವಯ ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣೆ